**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 184/2023**

ಪಿಡಬ್ಲ್ಯೂ: 06

ಸಿಡಬ್ಲ್ಯೂ: 09

| | | |
|---|---|---|
| ಹೆಸರು | : | ಮಲ್ಲೇಶಪ್ಪ ಬೀಮಪ್ಪ ಬಣಕಾರ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಗುಮ್ಮನಹಳ್ಳಿ |

ದಿನಾಂಕ : 19.04.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

2023 ನೇ ವರ್ಷದಲ್ಲಿ ಆರೋಪಿತನು ಚಾಸಾ-12 ರವರ ಮನೆಗೆ ಹೋಗುತ್ತಿದ್ದನು. ಕುಬೇರಪ್ಪ ಈತನು ಚಾಸಾ-12 ರವರ ಮನೆಗೆ ಬರಬಾರದು ಅಂತಾ 2-3 ಬಾರಿ ಹೇಳಿದನು. ಆರೋಪಿತರನು ಚಾಸಾ-12 ರವರ ಜೊತೆಗೆ ಅಸಭ್ಯವಾಗಿ ವರ್ತಿಸುವುದನ್ನು ನೋಡಿ ಕುಬೇರಪ್ಪ ಜಗಳ ಮಾಡುತ್ತಾ ಬಂದನು. ಆಗ ನಾನು, ಚಾಸಾ-10 ಮತ್ತು 11 ರವರು ಪಂಚಾಯತಿ ಮಾಡಿರುತ್ತೇವೆ. ಆರೋಪಿತನು ಕುಬೇರಪ್ಪನಿಗೆ ಹಿಂದೆ ನಾಗರಾಜ ಗುತ್ತಲ ಅವರನು ಕೊಲೆ ಮಾಡಿದ್ದೆ ಹಾಗೇ ನಿನ್ನೂ ಕೊಲೆ ಮಾಡುತ್ತೇನೆ ಅಂತಾ ಹೇಳಿರುತ್ತಾನೆ. ನಂತರ 2-3 ದಿನಗಳ ನಂತರ ಕುಬೇರಪ್ಪ ಮಾನಸಿಕವಾಗಿ ನಮ್ಮ ಊರ ಹೊಂಡದಲ್ಲಿ ಹಾರಿ ಮರಣ ಹೊಂದಿರುತ್ತಾನೆ. ನಂತರ ಮಧ್ಯಾಹ್ನ 1.00 ಗಂಟೆಗೆ ಗೊತ್ತಾಯಿತು. ಆಗ 1.30 ಗಂಟೆ ಆಗಿರುತ್ತದೆ. ಸುಬಾಸನ ಹೆಣ 3.00 ಗಂಟೆಗೆ ಸಿಕ್ಕಿರುತ್ತದೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಿಪಿ-01 ರ ಮೇಲಿನ ಸಹಿಯನ್ನು ನಿಪಿ-01(ಸಿ), 01(ಡಿ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿ

ಗುರುತಿಸಿರುತ್ತಾರೆ. ನಿಪಿ–01 ಕ್ಕೆ ಚಾಸಾ–01 ರವರ ಮಾಹಿತಿಯಂತೆ ಬರೆದು ಸಹಿ ಮಾಡಿದ್ದೇನೆ.

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲು : ಮಾನ್ಯ ಎಪಿಪಿ ಯವರಿಂದ :**

ದಿಃ 04.05.2023 ರಂದು ಸುಬಾಸ ಮನೆ ಬಿಟ್ಟು ಹೋಗಿದ್ದಾ ಅಂದರೆ ಸರಿ. ಈ ಬಗ್ಗೆ ಚಾಸಾ–01 ರವರು ದೂರು ಕೊಟ್ಟ ಬಗ್ಗೆ ನನಗೆ ಗೊತ್ತಿರುತ್ತದೆ. ನಮ್ಮ ಊರಿನಲ್ಲಿ ಚುನಾವಣೆ ಇರುವಾಗ ಆರೋಪಿತನು ಚಾಸಾ–12 ರವರ ಮನೆಗೆ ಹೋಗುವುದು ಬರುವುದು ಮಾಡುತ್ತಿದ್ದಾ ಅಂದರೆ ಸರಿ. ಈ ಬಗ್ಗೆ ಕುಬೇರಪ್ಪ ಆರೋಪಿತನನ್ನು ಪ್ರಶ್ನೆ ಮಾಡಿದಾ ಅಂದರೆ ಸರಿ. ನಂತರ ಬೊಸಡಿ ಮಗ ಅಂತಾ ಬೈದನು ಅಂದರೆ ಸರಿ. ದಿಃ 12.05.2023 ರಂದು ಮಧ್ಯಾಹ್ನ 1.30 ಗಂಟೆಗೆ ಹೊಂಡದಲ್ಲಿ ಹೆಣ ಬಿದ್ದಿತ್ತು ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಊರಿನ ಜನ ಸೇರಿದ್ದರು ಅಂದರೆ ಸರಿ. ಚಾಸಾ–01 ರವರು ಈ ಬಗ್ಗೆ ದೂರನ್ನು ನೀಡಿದ್ದರು ಅಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಚಾಸಾ–01, ಕುಬೇರಪ್ಪ ಮತ್ತು ನಾವು ಸಂಬಂಧಿಕರು ಎಂದರೆ ಸರಿ. ನಾನು ಘಟನೆ ಆದಾಗ ಗುಮ್ಮನಹಳ್ಳಿ ಚೇರಮನ್ ಇದ್ದೆ ಅಂದರೆ ಸರಿ. ಆ ಸಮಯದಲ್ಲಿ ಆರೋಪಿತನಿಗೆ ಜನತಾ ಮನೆ ಮಂಜೂರು ಆಗಿತ್ತು ಎಂದರೆ ಸರಿ. ಅದಕ್ಕೆ ಸರ್ಕಾರದಿಂದ 5 ಲಕ್ಷ ಹಣ ಮಂಜೂರು ಆಗಿತ್ತು ಅಂದರೆ ಸರಿ. ಆಗ ಆರೋಪಿತನಿಗೆ ನನಗೆ 1 ಲಕ್ಷ ಹಣ ಕೊಟ್ಟರೆ 5 ಲಕ್ಷ ಹಣ ಕೊಡುಸುತ್ತೇನೆ ಅಂದರೆ ಸರಿಯಲ್ಲಾ. ಈ ಬಗ್ಗೆ ನನಗೂ ಮತ್ತು ಆರೋಪಿತನಿಗೂ ದ್ವೇಷ ಇತ್ತು ಎಂದರೆ ಸರಿಯಲ್ಲಾ.

ಚಂದ್ರಮ್ಮ ಮತ್ತು ಕುಬೇರಪ್ಪ ಇಬ್ಬರಿಗೂ ಜಗಳ ಇತ್ತು ಎಂದರೆ ಸರಿಯಲ್ಲಾ. ಕುಬೇರಪ್ಪ ಸರಾಯಿ ಕುಡಿಯುತ್ತಿದ್ದ ಅಂದರೆ ಸರಿಯಲ್ಲಾ. ಚಂದ್ರಮ್ಮ ಮತ್ತು ಕುಬೇರಪ್ಪನ ನಡುವೆ ಜಗಳ ಇರುವುದರಿಂದ 12.05.2023 ರಂದು ಸರಾಯಿ ಕುಡಿದು ತಾನೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಅಂದರೆ ಸರಿಯಲ್ಲಾ. ಕುಬೇರಪ್ಪ ಮರಣ ಹೊಂದಿದ್ದರಿಂದ ಆರೋಪಿತನಿಗೆ ದ್ವೇಷ ಸಾದಿಸಲು ಚಾಸಾ–01 ರವರ ದೂರುಪಯೋಗ ಪಡೆದುಕೊಂಡು ನಾನೇ ನಿಪಿ–01 ನ್ನು ಬರೆದು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ನಿಪಿ–01 ರಲ್ಲಿ ಚಾಸಾ–01 ರವರಿಗೆ ಏನು ಬರೆದಿದೆ ಅಂತಾ ಗೊತ್ತಿಲ್ಲಾ ಅಂದರೆ ಸರಿಯಲ್ಲಾ. ಚಾಸಾ–01 ರವರ ಹೇಳಿಕೆಯ ಪ್ರಕಾರ ನಿಪಿ–01 ನ್ನು ಬರೆದಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತನು ಕುಬೇರಪ್ಪನಿಗೆ ದಂಮ್ಕಿ ಹಾಕಿದಾಗ ನಾನು ಇದ್ದೆ. ಆರೋಪಿತನು ನಾಗರಾಜ ಗುತ್ತಲ ಈತನನ್ನು ಕೊಲೆ ಮಾಡಿದ ಹಾಗೇ ಕೊಲೆ ಮಾಡುತ್ತೇನೆ ಅಂತಾ ಬೈದ ಬಗ್ಗೆ ಪೊಲೀಸ ಮುಂದೆ ಹೇಳಿಕೆ ನೀಡಿಲ್ಲಾ ಅಂದರೆ ಸಾಕ್ಷಿಯು ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೇಳಿದ ಹಾಗೇ ಯಾವುದೇ ಘಟನೆ ನಡೆದಿಲ್ಲಾ, ನಿಪಿ–01 ರಲ್ಲಿ ಬರೆದ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲಾ. ಆರೋಪಿತನ ಮೇಲೆ ನನಗೆ ದ್ವೇಷ ಇರುವುದರಿಂದ ಕುಬೇರಪ್ಪ ಮರಣ ಹೊಂದಿದ್ದನ್ನು ದೂರುಪಯೋಗ ಪಡಿಸಿಕೊಂಡು ಚಾಸಾ–01 ರವರ ಕಡೆಯಿಂದ ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.